1. ಪ್ರಕಟಣೆ

ವಿಷಯ:– ವಿಧಾನಸಭೆಯ ಸಲಹಾ ಸಮಿತಿಯ ಕಾರ್ಯಕಲಾಪಗಳ ವರದಿ

ಅಧ್ಯಕ್ಷರು:– ದಿನಾಂಕ 24.07.2007ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ.

1. ದಿನಾಂಕ 28ನೇ ಜುಲೈ, 2007ರ ಶನಿವಾರದಂದು ಅಧಿವೇಶನವನ್ನು ನಡೆಸಲಾಗುವುದು. ಅಲ್ಲದೇ ಪ್ರಸ್ತುತ ಅಧಿವೇಶನವನ್ನು 3ನೇ ಆಗಸ್ಟ್ 2007ರವರೆಗೆ ವಿಸ್ತರಿಸಲಾಗಿದೆ.
2. ಪ್ರತಿದಿನ ಕಾರ್ಯಕಲಾಪಗಳನ್ನು ಬೆಳಿಗ್ಗೆ 10.00 ಗಂಟೆಯಿಂದ ಸಾಯಂಕಾಲ 6.00 ಗಂಟೆಯವರಗೆ ಭೋಜನ ವಿರಾಮವಿಲ್ಲದೆ ನಡೆಸಲಾಗುವುದು.
3. ದಿನಾಂಕ 27.7.2007 ರಂದು ವಿತ್ತೀಯ ಕಾರ್ಯಕಲಾಪಗಳ ಚರ್ಚೆ ಪೂರ್ಣಗೊಳ್ಳಲಿದ್ದು, ದಿನಾಂಕ 28.7.2007 ರಂದು ಉಪಮುಖ್ಯಮಂತ್ರಿಯವರು ಹಾಗೂ ಮುಖ್ಯಮಂತ್ರಿಯವರಿಂದ ಉತ್ತರ ಹಾಗೂ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸಿ ವಿಧಾನ ಪರಿಷತ್ತಿಗೆ ಕಳುಹಿಸಲಾಗುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು adjournment motion ಕೊಟ್ಟಿದ್ದೆ.

ಅಧ್ಯಕ್ಷರು: after question hour.

ಶ್ರೀ ಜೆ. ಸಿ. ಮಾಧುಸ್ವಾಮಿ: ಈ ಕ್ಯಾಂಟೀನ್‌ನನ್ನು ನಿಲ್ಲಿಸಿಬಿಡಿ. ಅಲ್ಲಿ ಹೋಗುವಂತೆ ಬರುವಂತೆ ಇಲ್ಲ. ಯಾವ ಮಂತ್ರಿ ಊಟಕ್ಕೆ ಕರೆದರೂ ಎಲ್ಲರೂ ತುಂಬಿಕೊಂಡಿರುತ್ತಾರೆ. ಎಂ.ಎಲ್.ಎ.ಗಳಿಗೆ ಮಧ್ಯಾಹ್ನ ಊಟಕ್ಕೆ ಏನಾದರೂ arrange ಮಾಡಿದರೆ ಅಲ್ಲಿ ಕಾಲು ಇಡದಂತೆ ಆಗಿದೆ. ಯಾರು ಬರುತ್ತಾರೆ, ಎಲ್ಲಿಂದ ಬರುತ್ತಾರೆ ಸ್ವಲ್ಪ ನೋಡಿ. ನಮಗೆ ಊಟ ಬೇಡ, ನಿಲ್ಲಿಸಿಬಿಡಿ ದಯವಿಟ್ಟು,

ಅಧ್ಯಕ್ಷರು: ಆಯಿತು. ಈಗ ಪ್ರಶ್ನೋತ್ತರಗಳು.

2. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಗ್ರಾಮ ಪಂಚಾಯತ್‌ಗಳ ವಾರ್ಷಿಕ ಅನುದಾನ

183 (1480) ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿರುವ ಗ್ರಾಮ ಪಂಚಾಯತ್‌ಗಳಿಗೆ ಸರ್ಕಾರ ನೀಡುತ್ತಿರುವ ವಾರ್ಷಿಕ ಅನುದಾನ ಎಷ್ಟು; (ಕ್ಷೇತ್ರವಾರು ವಿವರ ಒದಗಿಸುವುದು);

(ಆ) ಈ ಅನುದಾನ ಸಮರ್ಪಕ ಬಳಕೆಯ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ನಿಯಂತ್ರಣ ಕ್ರಮಗಳೇನು ? (ವಿವರ ನೀಡುವುದು)

ಶ್ರೀ ಸಿ.ಎಂ. ಉದಾಸಿ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

(ಅ) ರಾಜ್ಯದಲ್ಲಿ 2006–07ನೇ ಸಾಲಿನಲ್ಲಿ 5652 ಗ್ರಾಮ ಪಂಚಾಯಿತಿಗಳಿದ್ದು, 2007–08ನೇ ಸಾಲಿನಲ್ಲಿ ಬೃಹತ್ ಬೆಂಗಳೂರಿಗೆ ಬೆಂಗಳೂರು (ನಗರ) ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ 24 ಗ್ರಾಮ ಪಂಚಾಯಿತಿಗಳು ವಿಲೀನಗೊಂಡ ಕಾರಣ ರಾಜ್ಯದಲ್ಲಿ ಒಟ್ಟು 5628 ಗ್ರಾಮ ಪಂಚಾಯಿತಿಗಳು ಅಸ್ತಿತ್ವದಲ್ಲಿರುತ್ತವೆ. ಎಲ್ಲಾ ಕ್ಷೇತ್ರಗಳ ಪ್ರತಿ ಗ್ರಾಮ ಪಂಚಾಯಿತಿಗೆ ಸಮನಾಗಿ ವಾರ್ಷಿಕ ಅನುದಾನವಾಗಿ ರೂ. 5.00 ಲಕ್ಷಗಳ ಶಾಸನಬದ್ಧ ಅನುದಾನ ನೀಡಲಾಗುತ್ತಿದೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ)

(ಆ) ಶಾಸನಬದ್ಧ ಅನುದಾನವನ್ನು ಗ್ರಾಮ ಪಂಚಾಯಿತಿಗಳ ಬ್ಯಾಂಕ್ ಖಾತೆಗೆ ಸರ್ಕಾರದಿಂದ ನೇರವಾಗಿ ಜಮೆ ಮಾಡಲಾಗುತ್ತಿದೆ. ಈ ಶಾಸನಬದ್ಧ ಅನುದಾನವನ್ನು ಗ್ರಾಮ ಪಂಚಾಯಿತಿಗಳು ಕ್ರಿಯಾ ಯೋಜನೆ ರೂಪಿಸಿಕೊಂಡು ವೆಚ್ಚ ಮಾಡಬೇಕಾಗಿರುತ್ತದೆ. ಈ ಬಗ್ಗೆ ಸರ್ಕಾರದ ಸುತ್ತೋಲೆ ಹೊರಡಿಸಲಾಗಿದೆ. ಉಸ್ತುವಾರಿ ಮಾಡುವ ಜವಾಬ್ದಾರಿಯನ್ನು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ವಹಿಸಲಾಗಿದೆ.

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 234 ಗ್ರಾಪಂಅ 2007 ದಿನಾಂಕ 21-05-2007

ಕ್ರಮ ಸಂಖ್ಯೆ	ಉಪ ವಿಭಾಗ ಕೇಂದ್ರ ಕಚೇರಿ	ಜಿಲ್ಲಾ ಪಂಚಾಯತಿ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	2007-08ನೇ ಸಾಲಿನ ಬಜೆಟ್ (ರೂ. ಲಕ್ಷಗಳಲ್ಲಿ)	ಮೊದಲನೆ ಕಂತಿನ ಅನುದಾನ (ರೂ.ಲಕ್ಷಗಳಲ್ಲಿ) 21-5-2007
1	2	3	4	5	9
1	401	ಬೆಂಗಳೂರು(ಪ)	86	465	107.5
2	402	ಬೆಂಗಳೂರು(ಗ್ರಾ)	228	1140	285
3	403	ಚಿತ್ರದುರ್ಗ	185	925	231.25
4	404	ಕೋಲಾರ	307	1525	383.75
5	405	ಶಿವಮೊಗ್ಗ	260	1300	325
6	406	ತುಮಕೂರು	321	1605	401.25
7	407	ಮೈಸೂರು	235	1175	293.75
8	408	ಚಿಕ್ಕಮಗಳೂರು	226	1130	282.5
9	409	ದಕ್ಷಿಣಕನ್ನಡ	203	1015	253.75
10	410	ಹಾಸನ	258	1290	322.5
11	411	ಕೊಡಗು	98	490	122.5
12	412	ಮಂಡ್ಯ	232	1160	290
13	413	ಬೆಳಗಾಂ	485	2425	606.25
14	414	ಬಿಜಾಪುರ	199	995	248.75
15	415	ಧಾರವಾಡ	127	635	158.75
16	416	ಉತ್ತರಕನ್ನಡ	206	1035	257.5
17	417	ಗುಲ್ಬರ್ಗ	337	1685	421.25
18	418	ಬಳ್ಳಾರಿ	189	945	236.25
19	419	ಬೀದರ್	175	875	218.75
20	420	ರಾಯಚೂರು	164	820	205
21	451	ದಾವಣಗೆರೆ	230	1150	287.5
22	456	ರಾಮನಗರ	120	600	150.00
23	457	ಉಡುಪಿ	146	730	182.50
24	461	ಬಾಗಲಕೋಟೆ	163	815	203.75
25	462	ಗದಗ	106	530.00	132.5
26	463	ಹಾವೇರಿ	208	1040	260.00
27	466	ಕೊಪ್ಪಳ	134	670	167.50
		ಒಟ್ಟು	5628	28180	7035.00

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿದ್ದಾರೆ, ಅದರಲ್ಲಿ ನಾನು ಜನ ಸಂಪರ್ಕ ಸಭೆಗಳಿಗೆ ಗ್ರಾಮ ಪಂಚಾಯಿತಿಗೆ ಭೇಟಿ ಕೊಟ್ಟಾಗ ಅಲ್ಲಿ ಗ್ರಾಮ ಪಂಚಾಯಿತಿ ಸದಸ್ಯರ ಹತ್ತಿರ, ಗ್ರಾಮಸ್ಥರ ಹತ್ತಿರ ಅನುದಾನ ಹೇಗೆ ಉಪಯೋಗ ಆಗುತ್ತಿದೆ ಎಂದು ಕೇಳಿದಾಗ, ನಮಗೆ 8 ಲಕ್ಷ ಅನುದಾನ ಬಂತು, ಅದನ್ನು ನಮ್ಮ 13 ಜನ ಸದಸ್ಯರಲ್ಲಿ ಹಂಚಿಕೊಂಡೆವು ಎಂದು ಹೇಳಿದರು. 13 ಜನ ಹಂಚಿಕೊಂಡೆವು ಎಂದರೆ ಅವರೇನು ಸ್ವಂತಕ್ಕೆ ಹಂಚಿಕೊಂಡಿಲ್ಲ. ಅವರವರ ಪಂಚಾಯಿತಿ ವಾರ್ಡ್‌ಗಳಿಗೆ ಹಂಚಿಕೊಂಡಿದ್ದಾರೆ. 10 ಲಕ್ಷ ರೂಪಾಯಿನ estimate ಕೆಲಸ ಇದ್ದರೆ ಇವರಲ್ಲಿ ಹಂಚಿಕೊಂಡಿರುವಂತೆ ಸಿಕ್ಕಿರುವುದು ಒಬ್ಬರಿಗೆ 60 ಸಾವಿರ ಮಾತ್ರ. ಆ 60 ಸಾವಿರಕ್ಕೆ ಮತ್ತೆ ಅನುದಾನ ಕ್ರೋಢೀಕರಿಸಿಕೊಡಬೇಕಾದರೆ ಸಮರ್ಪಕವಾಗಿ ಕೆಲಸ ಆಗುತ್ತಿಲ್ಲ. ಸಮರ್ಪಕವಾಗಿ ಆಗುವ ದೃಷ್ಟಿಯಿಂದ ಗ್ರಾಮೀಣ ಅಭಿವೃದ್ಧಿ ಇಲಾಖೆಯಿಂದ ಏನಾದರೂ ನಿರ್ದೇಶನ ಕೊಟ್ಟಿದೆಯೇ? ಈ ರೀತಿ ಸದ್ಬಳಕೆ ಆಗಿರುವ ಬಗ್ಗೆ ವರದಿ ತರಿಸಿಕೊಂಡಿದ್ದಾರೆಯೇ? ಸದ್ಬಳಕೆ ಆಗದೇ ದುರುಪಯೋಗವಾಗಿರುವ ಬಗ್ಗೆ ಎಷ್ಟು ಕಡೆಯಿಂದ ವರದಿ ಬಂದಿದೆ?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಆಕ್ಷೇಪವನ್ನು ವ್ಯಕ್ತಪಡಿಸುತ್ತಿರುವುದು ತಲಾವಾರು ಪಂಚಾಯಿತಿ ಸದಸ್ಯರು ಅನುದಾನವನ್ನು ಹಂಚಿಕೊಂಡು ಕೆಲಸ ಮಾಡುತ್ತಿದ್ದಾರೆ. ನಾವು ಅವರಿಗೆ ಸೂಚನೆ ಕೊಟ್ಟಿರುವ ಪ್ರಕಾರ ಗ್ರಾಮದಲ್ಲಿ ಆಗಬೇಕಾಗಿರುವ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಆದ್ಯತೆಯನ್ನು ಕೊಟ್ಟು ಕೆಲಸ ಮಾಡಬೇಕು ಎನ್ನುವಂಥ ಸಲಹೆಯನ್ನು ಕೊಟ್ಟಿದ್ದರು ಸಹ, ಏನಾಗುತ್ತಿದೆ ಎಂದರೆ, ಪಂಚಾಯಿತಿಗೆ ಸಂಪೂರ್ಣವಾದ ಅಧಿಕಾರ ಇರುವುದರಿಂದ, ಗ್ರಾಮಸಭೆಗಳಲ್ಲಿ ಜನರು ಸೂಚಿಸಿದಂಥ ಅಭಿವೃದ್ಧಿ ಕೆಲಸ ಕಾರ್ಯಗಳ ಕ್ರಿಯಾ ಯೋಜನೆಯನ್ನು ಮಾಡಬೇಕಾದ ಪಂಚಾಯಿತಿಯಲ್ಲಿ ಅವಶ್ಯಕತೆಯನ್ನು ಗಮನದಲ್ಲಿ ಇಟ್ಟುಕೊಂಡು ಮಾಡಬೇಕಾಗಿರುವುದು ಅವರ ಕೆಲಸ. ಅದು ಆಗದೆಯೇ ಪಂಚಾಯಿತಿ ಸದಸ್ಯರು ತಮ್ಮ ವಾರ್ಡ್‌ಗಾಗಿ ಸೀಮಿತಗೊಳಿಸಿ ತಮಗೆ ಬಂದಿರುವ ಪಾಲಿನ ಹಣವನ್ನು ಖರ್ಚು ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಈ ರೀತಿ ಆಗಬಾರದು, ಕ್ರಿಯಾ ಯೋಜನೆಯನ್ನು ತಯಾರು ಮಾಡಿದ ಮೇಲೆ ಅನುಮೋದನೆ ಪಡೆದು ಮಾಡಬೇಕು ಎಂದು ಸಲಹೆಯನ್ನು ನೀಡಬೇಕಾದ ಅವಶ್ಯಕತೆ ಇದೆ. ಇದು ಸರ್ಕಾರದ ಗಮನಕ್ಕೂ ಬಂದಿದೆ. ಆ ರೀತಿ ಅದು ಸದ್ಬಳಕೆ ಆಗುವಂತೆ ಮಾಡುವ ವ್ಯವಸ್ಥೆಗೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಸಿ.ಟಿ. ರವಿ:– ಈ ರೀತಿ ಎಷ್ಟು ಕಡೆ ದುರ್ಬಳಕೆಯಾಗಿದೆ ಎಂಬ ಬಗ್ಗೆ ಮಾಹಿತಿ ಇದೆಯೇ? ದುರ್ಬಳಕೆಯಾಗಿದ್ದರೆ ಯಾರ ಮೇಲೆ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಡಿ.ಎನ್. ಜೀವರಾಜ್:– ಇಲ್ಲಿ ಸನ್ನಿವೇಶ ಯಾವ ರೀತಿ ಇದೆ ಎಂದರೆ, 11 ಲಕ್ಷ ಹಣ ಇದೆ, 117 worksಗೆ ಗ್ರಾಮ ಪಂಚಾಯಿತಿಯವರು ಅನುಮೋದನೆ ಕೊಡುತ್ತಾರೆ. ಆ ಗ್ರಾಮ ಪಂಚಾಯಿತಿಯ ಇಂಜಿನಿಯರ್‌ಗಳು ಯಾವುದೇ ಕಾರಣಕ್ಕೂ ಕೆಲಸ ಮಾಡಲು ಸಾಧ್ಯವಿಲ್ಲ. 117 estimates ಅನ್ನು ಒಂದೊಂದು ಪಂಚಾಯಿತಿಯಲ್ಲಿ ಆ ಇಂಜಿನಿಯರ್ ಮಾಡಬೇಕು ಎಂದರೆ 4–5 ಪಂಚಾಯಿತಿ ಒಬ್ಬೊಬ್ಬರು ಇಂಜಿನಿಯರ್ ಹತ್ತಿರ ಇದೆ, ಅವರು 500–600 estimate ಮಾಡಬೇಕು, ದಿನಕ್ಕೆ ಕನಿಷ್ಠ 3 estimateಅನ್ನು ಗ್ರಾಮ ಪಂಚಾಯಿತಿಯದ್ದನ್ನೇ ಮಾಡಬೇಕು. ಇನ್ನು ಜಿಲ್ಲಾ ಪಂಚಾಯಿತಿಯದ್ದು, ತಾಲ್ಲೂಕು ಪಂಚಾಯಿತಿಯದ್ದು, ಶಾಸಕರ ಅನುದಾನದ್ದು ಇಷ್ಟೂ ಕೆಲಸದ್ದು estimate ಅವರು ಮಾಡಬೇಕೆಂದರೆ ಇಂಜಿನಿಯರ್‌ಗಳ ಕೈಯಲ್ಲಿ ಸಾಧ್ಯವಿಲ್ಲ. ಜೊತೆಗೆ ಇಂಜಿನಿಯರ್‌ಗಳ ಕೊರತೆ ಕೂಡ ಇದೆ. ಆಸ್ತಿ ನಿರ್ಮಾಣ ಮಾಡಬೇಕು ಎಂದು ಕಾನೂನಿನಲ್ಲೇ ಇದೆ, ಆದ್ದರಿಂದ ಆ ರೀತಿಯ ಆದೇಶವನ್ನು ಮಾನ್ಯ ಉದಾಸಿಯವರು ಗ್ರಾಮ ಪಂಚಾಯಿತಿಯ ಸಿ.ಇ.ಓ.ಗಳಿಗೆ ಇಲ್ಲವೆ ಕಾರ್ಯದರ್ಶಿಗಳಿಗೆ ಕಳುಹಿಸುವುದರಿಂದ ಒಳ್ಳೆಯದಾಗುತ್ತದೆ ಎಂದು ನನ್ನ ಅಭಿಪ್ರಾಯ.

ಶ್ರೀ ಸಿ.ಎಂ. ಉದಾಸಿ: ಹಣ ದುರ್ಬಳಕೆ ಆಗಿರುವ ಬಗ್ಗೆ ಮಾನ್ಯ ಸಿ.ಟಿ. ರವಿಯವರು ಪ್ರಶ್ನೆ ಮಾಡಿದ್ದಾರೆ. ದುರ್ಬಳಕೆ ಆಗಿರುವ ಪ್ರಕರಣಗಳಲ್ಲಿ 232 ಗ್ರಾಮಪಂಚಾಯಿತಿಗಳ ಮೇಲೆ ಕಾನೂನಿನ ಕ್ರಮ ಕೈಗೊಳ್ಳಬೇಕಾದ ಕೆಲಸವನ್ನು ಈಗಾಗಲೇ ನಾವು ಮಾಡಿದ್ದೇವೆ. 19 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ದುರ್ಬಳಕೆ ಆಗಿರುವ ಬಗ್ಗೆ ಈಗಾಗಲೇ ಕ್ರಮ ಕೈಗೊಳ್ಳುವಂಥ ವ್ಯವಸ್ಥೆ ಮಾಡಿದ್ದೇವೆ. ಜೀವರಾಜ್‌ರವರು ಪ್ರಸ್ತಾಪ ಮಾಡಿದಂತೆ ಅಲ್ಲಿ ಲಭ್ಯತೆ ಇರುವ ಹಣಕ್ಕೆ 8 ಲಕ್ಷ ರೂಪಾಯಿಗಳಿಗೆ 100–200–500 ಕ್ಕಿಂತ ಹೆಚ್ಚು ಯೋಜನೆಗಳನ್ನು ತಯಾರು ಮಾಡಿ ಆ ಕ್ರಿಯಾ ಯೋಜನೆಗಳನ್ನು ಮಂಜೂರಾತಿಯನ್ನು ಪಡೆಯಬೇಕಾದರೆ ಅದಕ್ಕೆ ಅನುಮೋದನೆ ಪಡೆಯುವಲ್ಲಿ ಆ ಇಂಜಿನಿಯರ್‌ರಿಂದ ಅಸಾಧ್ಯವಾಗುತ್ತಿದೆ. ಕೆಲವು ಸಂದರ್ಭದಲ್ಲಿ 100, 500, 1000 ರೂಪಾಯಿ ಕೆಲಸ ಈ ರೀತಿ ಮಾಡುತ್ತಿರುವುದು ಸರಿಯಾದ ಕ್ರಮವಲ್ಲವೆಂದು ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇವೆ. ಇನ್ನು ಮುಂದೆ ಈ ರೀತಿ ಆಗಬಾರದು ಎಂಬ ದೃಷ್ಟಿಯಿಂದ, ನಾವು

ಇದರಲ್ಲಿ ಹಸ್ತಕ್ಷೇಪ ಮಾಡಿದ್ದೇವೆ ಎಂಬ ಭಾವನೆ ಮೂಡುತ್ತಿದೆ. ನಾವು ಏನಾದರೂ ಒಂದು ಯೋಜನೆಯನ್ನು ಆದ್ಯತೆಯ ಮೇಲೆ ಗುರುತಿಸಬೇಕು ಎಂದು ಹೇಳಿದರೆ ಅವರು ನಮಗೆ ಕೊಟ್ಟಿರುವ ಸ್ವಾತಂತ್ರ್ಯವನ್ನು ಹರಣ ಮಾಡಲು ಹೊರಟಿದ್ದಾರೆ ಎಂದು ಆಕ್ಷೇಪವನ್ನು ಮಾಡಲು ಪ್ರಾರಂಭ ಮಾಡುತ್ತಿದ್ದಾರೆ. ಇದನು ಹೋಗಲಾಡಿಸಲು ಎಂಬ ದೃಷ್ಟಿಯಿಂದಲೇ ಇನ್ನು ಮುಂದೆ ಹಣ ವೆಚ್ಚವಾಗಿರುವುದು ಸರಿಯಾದ ದೃಷ್ಟಿಯಿಂದ ನೋಡಿಕೊಳ್ಳಬೇಕು ಎಂದು Chartered Accountant ಅವರ ಮೂಲಕ ಎಲ್ಲಾ ಲೆಕ್ಕಗಳನ್ನು ಪರಿಶೋಧನೆ ಮಾಡಬೇಕಾದ ಕೆಲಸವನ್ನು ನಾಲ್ಕು ಪಂಚಾಯಿತಿಗೆ ಒಬ್ಬ ಅಧಿಕಾರಿ ಅಲ್ಲಿ Chartered Accountant Assistant ಹೋಗಿ ವಾರದಲ್ಲಿ ಒಂದು ಸಲವಾದರೂ ಸಹ ನೋಡುವಂಥ ಕೆಲಸ ಮಾಡಬೇಕು ಎಂಬ ಗುರಿ ಹೊಂದಿ ಇನ್ನು ಮುಂದೆ ಈ ಅವ್ಯವಸ್ಥೆ ತಪ್ಪಿಸುವ ಪ್ರಯತ್ನವನ್ನು ಮಾಡಲು ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶೌಚಾಲಯಗಳ ನಿರ್ಮಾಣ

184 (1408) ಶ್ರೀಮತಿ ಪರಿಮಳ. ಕೆ.ಎಸ್. (ಹನೂರು) ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಹನೂರು ವಿಧಾನ ಸಭಾ ಕ್ಷೇತ್ರದಲ್ಲಿ ಸರ್ಕಾರದ ಸಹಾಯಧನದಿಂದ ವೈಯಕ್ತಿಕವಾಗಿ ನಿರ್ಮಿಸಿರುವ ಶೌಚಾಲಯಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಆ) ಇವುಗಳ ಪೈಕಿ ಉಪಯೋಗಿಸದೆ ಇರುವ ಶೌಚಾಲಯಗಳೆಷ್ಟು? (ಇದಕ್ಕೆ ಕಾರಣಗಳೇನು)

(ಇ) ಸರ್ಕಾರವೇ ಸಂಪೂರ್ಣವಾಗಿ ಶೌಚಾಲಯ ವೆಚ್ಚವನ್ನು ಭರಿಸಿ ಶೌಚಾಲಯ ನಿರ್ಮಿಸಿ ಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

(ಈ) ಇಲ್ಲವಾದಲ್ಲಿ ಈ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸುವುದೇ?

ಶ್ರೀ ಎಸ್.ಎ. ರವೀಂದ್ರನಾಥ (ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

(ಅ) ಹನೂರು ವಿಧಾನ ಸಭಾ ಕ್ಷೇತ್ರದಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನದಡಿಯಲ್ಲಿ ಎಪಿಎಲ್ ಹಾಗೂ ಬಿಪಿಎಲ್ ಕುಟುಂಬಗಳೂ ಸೇರಿದಂತೆ ಒಟ್ಟು 2039 ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಸದರಿ ವೈಯಕ್ತಿಕ ಗೃಹ ಶೌಚಾಲಯಗಳ ಗ್ರಾಮ ಪಂಚಾಯತಿವಾರು ವಿವರ ಈ ಕೆಳಕಂಡಂತಿದೆ.